# ಬಾಯಿಯಿಂದ ಹೆರುವ ಕಪ್ಪೆ..!

ಬೆಳೆದ ಮರಿಗಳು ಹೊರ ಬರುವುದು ತಾಯಿಯ ಬಾಯಿಯ ಮೂಲಕ! ಮರಿಗಳು ಬೆಳವಣಿಗೆಯಾಗುವುದು ತಾಯಿಯ ಗರ್ಭದಲ್ಲಿ ಅಲ್ಲ, ಜಠರದಲ್ಲಿ. ಇಂಥ ಪ್ರಾಣಿಗಳೂ ಇವೆ ಎಂದು ಅಚ್ಚರಿಯಾ?

ಹೌದು ನಂಬಲೇಬೇಕು. ಬಾಯಿಯ ಮೂಲಕ ಹೆರುವ ಕಪ್ಪೆಯ ಪ್ರಭೇದಗಳಿವೆ. ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್‌ನಲ್ಲಿ ಮಾತ್ರ ಕಂಡು ಬಂದಿದ್ದ ಕಪ್ಪೆಗಳಿವು.

ಸಾಮಾನ್ಯ ಭಾಷೆಯಲ್ಲಿ ಇವುಗಳನ್ನು 'ಪ್ಲಾಟಿಪಸ್' ಕಪ್ಪೆಗಳೆನ್ನುವರು. ಶಾಸ್ತ್ರೀಯ ಹೆಸರು ರಿಯೊಬಾಟ್ರಕಸ್. 1973ರಲ್ಲಿ ಡೆವಿಡ್ ಲೈಮ್ ಇವುಗಳನ್ನು ಪತ್ತೆ ಹಚ್ಚಿದ. ಉಳಿದ ಕಪ್ಪೆಗಳಂತೆ ಹೆಣ್ಣು ಮತ್ತು ಗಂಡು ಕಪ್ಪೆಗಳು ಲಿಂಗಾಣುಗಳನ್ನು ಹೊರ ವಾತಾವರಣದಲ್ಲಿಯೇ ಇಡುತ್ತವೆ. ಆದರೆ ವಿಶಿಷ್ಟವಾಗಿರುವುದು ಮುಂದಿನ ಹಂತ. ಫಲಿತಗೊಂಡ ಮೊಟ್ಟೆಗಳನ್ನು ಹೆಣ್ಣು ಕಪ್ಪೆ ನುಂಗಿ ಬಿಡುತ್ತದೆ. ಮುಂದೆ ಮರಿಗಳು ಬೆಳವಣಿಗೆಯಾಗುವುದು ತಾಯಿಯ ಗರ್ಭದಲ್ಲಿ ಅಲ್ಲ, ಜಠರದಲ್ಲಿ. ಅನಂತರ ಬೆಳವಣಿಗೆಯಾದ ಮರಿಗಳು ಹೊರಬರುವುದು ತಾಯಿಯ ಬಾಯಿಯ ಮೂಲಕ.

1983ರ ಮಧ್ಯದಲ್ಲಿ ಭೂಮಿಯ ಮೇಲಿಂದ ಈ ಕಪ್ಪೆಗಳು ಕಣ್ಮರೆಯಾಗಿದ್ದವು. ನ್ಯೂ ಸೌತ್ ವೇಲ್ಸ್ ವಿಜ್ಞಾನಿಗಳು ಮಾರ್ಚ್ 2013ರಂದು, ಅಳಿದು ಹೋದ ಈ ಕಪ್ಪೆಗಳಿಗೆ ಕ್ಲೋನಿಂಗ್ ಮೂಲಕ ಮರು ಜೀವ ಕೊಟ್ಟಿದ್ದಾರೆ.

■ ನಾರಾಯಣ ಬಾಬಾನಗರ,
ವಿಜಾಪುರ



